ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಗುರುವಾರ, ದಿನಾಂಕ : 24 ನೇ ಸೆಪ್ಟೆಂಬರ್, 2020

ಕೆರೆಗಳ ದುರಸ್ತಿಗಾಗಿ ಒದಗಿಸಲಾದ ಅನುದಾನ

ಶ್ರೀ ಸುನೀಲ ವಲ್ಯಾಪುರ್(ವಿಧಾನ ಸಭೆಯಿಂದ ಚುನಾಯಿತರಾದವರು) -

558 (517) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಕಲಬುರಗಿ, ಯಾದಗಿರಿ, ಬೀದರ್ ಜಿಲ್ಲೆಗಳಲ್ಲಿರುವ ಒಟ್ಟು ಕೆರೆಗಳ ಸಂಖ್ಯೆ ಎಷ್ಟು;

(ಆ) ಅವುಗಳಲ್ಲಿ ದುರಸ್ತಿಯಲ್ಲಿರುವ ಕೆರೆಗಳ ಸಂಖ್ಯೆ ಎಷ್ಟು;

(ಇ) 2012 ರಿಂದ 2020ನೇ ಸಾಲಿನಲ್ಲಿ ಸಣ್ಣ ನೀರಾವರಿ ಇಲಾಖೆಗೆ ಕೆರೆ ದುರಸ್ತಿಗಾಗಿ ಒದಗಿಸಲಾದ ಅನುದಾನ ಎಷ್ಟು;

(ಈ) ಅನುದಾನ ಸ್ವೀಕೃತವಾಗಿದ್ದರೂ ಕೆರೆ ದುರಸ್ತಿ ಕಾರ್ಯ ಕೈಗೊಳ್ಳದಿರುವುದಕ್ಕೆ ಕಾರಣಗಳೇನು;

(ಉ) ಕೆರೆ ದುರಸ್ತಿಗಾಗಿ ಅನುದಾನ ಸ್ವೀಕೃತವಾಗದೇ ಇದ್ದಲ್ಲಿ, ಅನುದಾನ ಬಿಡುಗಡೆಗೊಳಿಸದಿರಲು ಕಾರಣಗಳೇನು?